ಶ್ರೀ ಡಿ. ದೇವರಾಜ ಅರಸ್.—ಇದು ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸೇರಿರಬಹುದು ಕೆಲವು ಸ್ಲಂಗಳು ಮೊದಲು ಇರಲಿಲ್ಲ. ಇತ್ತೀಚೆಗೆ ಬಂದಿರತಕ್ಕದ್ದು ಇದೆ. ಹೊಸದಾಗಿ ಸ್ಲಂ ಹುಟ್ಟಿಕೊಂಡಕೂಡಲೇ ನೀರನ್ನು ಕೊಡಲಿಕ್ಕೆ ಕಷ್ಟವಾಗುತ್ತದೆ. ಆದರೂ ಸಹ ಅದರ ಬಗ್ಗೆಯೂ ನೋಡಿಸೋಣ.

ಶ್ರೀಮತಿ ಎಸ್. ಪುಮಿಳ.—ಬೆಂಗಳೂರು ನಗರದ ಹಾರ್ಟ್ ಆಫ್ ದಿ ಸಿಟಿಯಲ್ಲಿ ವಿನೋಬ ನಗರ ಇದೆ. ಇಲ್ಲಿ ಸುಮಾರು ೪ ಸಾವಿರ ಜನ ಇರತಕ್ಕಂಥ ಸ್ಲಂನಲ್ಲಿ ಕೇವಲ ನಾಲ್ಕು ಟ್ಯಾಪ್‌ಗಳು ಇವೆ. ಅಲ್ಲಿರುವ ಮಹಿಳೆಯರ ಕಷ್ಟವನ್ನು ನೋಡುವುದಕ್ಕಾಗುವುದಿಲ್ಲ. ನಾನು ಇದರ ಬಗ್ಗೆ ನಗರದ ಕಾರ್ಪೊರೇಷನ್ ಆಡಳಿತಾಧಿಕಾರಿಯವರನ್ನು ನೋಡಿದಾಗ ಇದು ನಮಗೆ ಸಂಬಂಧಪಟ್ಟಿದ್ದಲ್ಲ, ಸ್ಲಂ ಬೋರ್ಡಿಗೆ ಸಂಬಂಧಪಟ್ಟಿದ್ದು ಎಂದು ಹೇಳಿದರು. ಸ್ಲಂ ಬೋರ್ಡಿನವರನ್ನು ವಿಚಾರ ಮಾಡಿದಾಗ ಅವರು ಹೇಳಿದರು, ನಮ್ಮ ಅಧ್ಯಕ್ಷರು ಇಲ್ಲ, ನಮ್ಮ ಕೆಲಸ, ಸ್ಲಂ ಡಿಕ್ಲರೇಷನ್ ಮಾಡುವುದು ಮತ್ತು ಇಂಪ್ರೂವ್‌ಮೆಂಟ್ ಮಾಡುವುದು ಎಂದು ಹೇಳಿದರು. ಮತ್ತೆ ಕೆಲವರು ಇದು ಬಿ.ಡಿ.ಎ.ಗೆ ಸಂಬಂಧಪಟ್ಟಿದ್ದು ಎಂದು ಹೇಳಿದರು. ಹೀಗೆಯೇ ಇದು ಕಳೆದ ೩೦ ವರ್ಷದಿಂದ ಆವರ ಮೇಲೆ ಇವರು, ಇವರ ಮೇಲೆ ಅವರು ಹೇಳಿಕೊಂಡು ಬಂದು ಅಲ್ಲಿರುವ ಜನಕ್ಕೆ ನೀರು ಇಲ್ಲವಾಗಿದೆ. ಅಲ್ಲಿ ಕುಡಿಯುವುದಕ್ಕೆ ನೀರು ಸಹ ಸಿಕ್ಕುತ್ತಿಲ್ಲ. ಮಾನ್ಯ ಮಂತ್ರಿಗಳು ಹಿಂದುಳಿದವರ್ಗದವರಿಗೆ ಬಹಳ ಅನುಕೂಲ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಅದಕ್ಕಾಗಿ ಕೇಳುತ್ತೇನೆ, ನಾಲ್ಕು ಸಾವಿರ ಜನಕ್ಕೆ ನಾಲ್ಕು ಟ್ಯಾಪ್‌ಗಳಿಂದ ನೀರು ದೊರಕಲು ಸಾಧ್ಯವೇ ಎಂದು?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯಣಿಯವರು, ಅವರು ಹೇಳಿದಂಥ ಸ್ಲಂನಲ್ಲಿ ನಾಲ್ಕು ಸಾವಿರ ಜನಕ್ಕೆ ಕೇವಲ ನಾಲ್ಕು ಟ್ಯಾಪ್‌ಗಳು ಇವೆಯೆಂದು ತಿಳಿಸಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ನನಗೆ ಗೊತ್ತಿರುವ ಹಾಗೆ, ಕೆಲವು ಸ್ಲಂಗಳಲ್ಲಿ ಸುಮಾರು ೧೦-೧೨ ಟ್ಯಾಪ್‌ಗಳು ಹೆಚ್ಚಾಗಿ ಇವೆ. ಹೊಸದಾಗಿ ಬಂದಿರತಕ್ಕ ಸ್ಲಂಗಳಲ್ಲಿ ಮತ್ತು ಪ್ರೈವೇಟ್ ಸೈಟ್‌ಗಳಲ್ಲಿ ಹುಟ್ಟಿಕೊಂಡಿರತಕ್ಕ ಸ್ಲಂಗಳಿಗೆ ಈ ರೀತಿಯಾಗಿರಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯಣಿಯವರು ಕಳೆದ ೩೦ ವರ್ಷಗಳಿಂದ ಆ ಸ್ಲಂ ಜನರು ನೀರು ಇಲ್ಲದೆ ಇದ್ದಾರೆ ಎಂದು ಹೇಳಿದರು. ಅವರಿಗೆ ಇನ್ನೂ ೩೦ ವರ್ಷಗಳ ವಿಚಾರ ಗೊತ್ತಿರಲಿಕ್ಕಿಲ್ಲ. ಮತ್ತೆ ಅವರು ನಾವು ಹಿಂದುಳಿದ ವರ್ಗಗಳಿಗೆ ಬಹಳ ಅನುಕೂಲ ಮಾಡುತ್ತೇವೆ ಎನ್ನುವ ಬಗ್ಗೆ ಹೇಳಿದರು. ನಾವೂ ಮಾಡೋಣ, ನೀವೂ ಮಾಡಿರಿ, ದೇವರ ಹತ್ತಿರ ಹೋಗುವುದಕ್ಕೆ ಯಾರ ಅಪ್ಪಣೆ ಏನು? ನಮ್ಮ ನಿಮ್ಮ ಭಕ್ತಿಯ ಮೇಲೆ ದೇವರು ಒಲಿಯುತ್ತಾನೆ. ತಾವು ಹೇಳಿದ ಜಾಗಗಳಿಗೆ ಬೇಕಾದರೇ ಮಾನ್ಯ ಮಂತ್ರಿಗಳು ಬಂದು ನೋಡುತ್ತಾರೆ, ಈ ವಿಚಾರವನ್ನು ಕಾರ್ಪೊರೇಷನ್ ಕಮಿಷನರ್ ಅವರು ನೋಡಬೇಕಾಗುತ್ತದೆಯೋ, ಅಥವಾ ಯಾರು ನೋಡುತ್ತಾರೆ ಎಂದು ತಿಳಿದು ನೀರಿನ ವ್ಯವಸ್ಥೆಯ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡೋಣ. ಈ ಸ್ಲಂಗಳು ಹೊಸದಾಗಿ ಬಂದಿವೆಯೋ ಏನೋ ಅದನ್ನೆಲ್ಲಾ ನೋಡಬೇಕು. ನೋಡಿ ಮಾಡಿಸೋಣ.

(iv) re : Incidents of Kyasanur Forest disease in Hosanagar etc. of Shimoga District.

SRI S. M. SHEERNALI CHANDRASHEKHAR.— Sir, I beg to call the attention of the Minister for Health to the incidents of Kyasanur Forest Disease in Hosanagar and other Taluks, in Shimoga District.

SRI M. MALLAPPA (Minister for Health).—Sir, I wish to make the following Statement.

During the year 1978 from 1st January 1978 to 18th March 1978 a total of 122 suspected Kyasanur Forest Disease cases and 4 deaths have been reported from 58 Villages of Hosanagar Taluk of Shimoga

District. 57 Monkey deaths have also been reported. Out of the 122 suspected cases, only 34 cases have been proved as positive cases after Laboratory Examination.

There is no specific drug to cure this disease. All cases are being treated systematically. Serious cases are hospitalised. The staff of K. F. D. Field Station Sagar and all the Medical Institutions in the Shimoga and neighbouring districts have been alerted.

Adequate drug supply has been made to the medical Institution of the department in the area. In addition, Rs. 25,000 has been released to District Health and Family Welfare Officer. Shimoga for purchase of drugs, IV Fluids etc., needed for urgent use. Wide publicity has been given regarding this disease, emphasing the dangers of visit to the Forest and places where Monkey deaths have occured.

The K.F.D. Co-ordination Committee consisting of Director of Health and Family Welfare Services, as Chairman, experts from Government of India. V.R.C. Poona and others as Members met at Shimoga on 20th March 1978 and visited some of the affected areas. Suitable action is being taken to prevent the dssease.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೆ, ಈ ಡಿಸೀಸ್ ನಮ್ಮ ಮಲೆನಾಡಿನ ತಾಲ್ಲೂಕುಗಳಲ್ಲಿ ನಾಲ್ಕೈದು ವರ್ಷಗಳಿಂದಲೂ ಇದೆ. ಮಾನ್ಯ ಮಂತ್ರಿಗಳು ಇಂದು ಕೂಡ ಅದಕ್ಕೆ ಸ್ಪೆಸಿಫಿಕ್ ಆಗಿ ಆಡಿಕ್ವೇಟ್ ಡ್ರಗ್ಸ್ ಇಲ್ಲ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಇದಕ್ಕೆ ಪ್ರಿವೆಂಟೀವ್ ಮೆತೆಡ್ ಇನ್ನೂ ಕಂಡು ಹಿಡಿದಿಲ್ಲ ಎಂದು ಅವರು ಹೇಳಿದರು. ಈ ರೀತಿಯಾಗಿ ಹೇಳಿಕೆಯನ್ನು ಹಿಂದಿನ ಆರೋಗ್ಯ ಸಚಿವರಾದ ಮಾನ್ಯ ಸಿದ್ದವೀರಪ್ಪನವರೂ ಕೊಟ್ಟಿದ್ದರು. ಮಲೆನಾಡಿನ ಜನ ಈ ರೋಗದಿಂದ ಭಯಗ್ರಸ್ಥರಾಗಿದ್ದಾರೆ. ಸುಮಾರು ೨೦೦-೩೦೦ ಜನರೂ ಆಸ್ಪತ್ರೆಗಳಲ್ಲಿ ಅಡ್ಮಿಟ್ ಆಗುತ್ತಿದ್ದು ಬದುಕುವುದು ಕಷ್ಟವಾಗಿದೆ. ಇದಕ್ಕೆ ಸರಿಯಾದಂಥ ಔಷಧಿ ಇಲ್ಲ. ಇದಕ್ಕೆ ಮಾನ್ಯಮಂತ್ರಿಗಳು ಯಾವ ರೀತಿಯ ಪರಿಹಾರ ಒದಗಿಸುತ್ತಾರೆ ?

ಶ್ರೀ ಎಂ. ಮಲ್ಲಪ್ಪ.— ಇದರಲ್ಲಿ ೧೨೨ ಜನರಲ್ಲಿ ಈ ರೋಗವನ್ನು ಹೊಂದಿದ್ದಾರೆಂದು ಸಸ್ಪೆಕ್ಟ್ ಮಾಡಲಾಗಿದೆ. ಪಾಸಿಟೀವ್ ಆಗಿರತಕ್ಕವರು ಕೇವಲ ೩೪ ಕೇಸುಗಳು ಮಾತ್ರ. ಇದಕ್ಕೆ ಬೇಕಾದಷ್ಟು ಔಷಧಿಯನ್ನು ಕೊಂಡುಕೊಳ್ಳುವುದಕ್ಕೆ ನಾವು ಈಗಾಗಲೇ ಸುಮಾರು ೨೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಪ್ರಿವ್ಂಟೀವ್ ಮೆಷರ್ಸ್ ಕೂಡ ತೆಗೆದುಕೊಳ್ಳುತ್ತೇವೆ. ಈಗ ಈ ರೋಗವನ್ನು ತಡೆಗಟ್ಟುತ್ತಿದ್ದೇವೆ.

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್.— ತಮ್ಮ ಹೇಳಿಕೆಯೊಳಗೆ ಇದಕ್ಕೆ ಸ್ಪೆಸಿಫಿಕ್ ಆಗಿ ಡ್ರಗ್ಸ್ ಇಲ್ಲ ಎಂದೂ, ಪ್ರಿವೆಂಟೀವ್ ಮೆಷರ್ಸ್ ಇಲ್ಲ ಎಂದೂ ಹೇಳಿದ್ದೀರಿ. ಇದನ್ನು ಯಾವಾಗ ತಡೆಗಟ್ಟುತ್ತೀರಿ, ಮತ್ತು ಇದಕ್ಕೆ ಯಾವಾಗ ಕ್ರಮ ತೆಗೆದುಕೊಂಡಿದ್ದೀರಿ? ಈ ರೋಗ ಜನರಿಂದ ದೂರ ವಾಗುತ್ತದೆ ಎನ್ನುವ ಆಶಾಭಾವ ನಮ್ಮ ಜನರಲ್ಲಿಲ್ಲ.

ಶ್ರೀ ಎಂ. ಮಲ್ಲಪ್ಪ.— ಇದರ ಬಗ್ಗೆ ತಜ್ಞರ ಕಮಿಟಿಯೊಂದು ಮೊನ್ನೆ ತಾನೆ ೨೩ನೇ ಮಾರ್ಚ್ ೧೯೭೮ ರಂದು ಆಫೆಕ್ಟೆಡ್ ಏರಿಯಾಗಳಿಗೆ ಹೋಗಿ, ಈ ರೋಗವನ್ನು ಕಂಡುಹಿಡಿದು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

There is no treatment for this anywhere in the world. It is under the active consideration of the Department. There are some preventive measures. Therefore, the number of persons affected have been reduced and also it is being treated. Only 34 cases have affected upto this day.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಇಂಥಾ ದಾರುಣ ಪರಿಸ್ಥಿತಿ ಇದ್ದರೂ ಸಹ ಹೊಸ ನಗರದಲ್ಲಿರುವ ವೈದ್ಯರು ಅಲ್ಲಿಗೆ ಬರದೆ ಶಿವಮೊಗ್ಗದಲ್ಲೇ ಉಳಿದುಕೊಂಡಿದ್ದು ಬೆಳಿಗ್ಗೆ ಎದ್ದು ಹೋಗುತ್ತಿದ್ದಾರೆ. ಅವರು ಶಿವಮೊಗ್ಗದಲ್ಲೇ ಇರುತ್ತಾರೆಯೇ ಹೊರತು ಅಲ್ಲಿಗೆ ಬರುವುದೇ ಇಲ್ಲ. ಅರಣ್ಯ ಕಾಯಿಲೆ ಬಗ್ಗೆ ಸಂಶೋಧನೆ ಮಾಡಲು ಸಹಾಯಕವಾಗುವಂತೆ ಸಾಗರದಲ್ಲಿ ಒಂದು ದೊಡ್ಡ ಕಟ್ಟಡವನ್ನು ಕಟ್ಟಿ ಐದಾರು ವರ್ಷಗಳಾಗಿವೆ. ಆದರೆ, ಈ ಕಾಯಿಲೆಯನ್ನು ತಡೆಗಟ್ಟುವುದಕ್ಕೆ ಯಾವ ಮಾರ್ಗವನ್ನೂ ಕಂಡಂ ಹಿಡಿದಿಲ್ಲ. ನಿರ್ದಿಷ್ಟವಾದ ಔಷಧಿಯೂ ಈ ಕಾಯಿಲೆಗಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಮಲ್ಲಪ್ಪ.— ಪ್ರಪಂಚದ ವೈದ್ಯರೇ ಇದರ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. ಆದರೂ, ಪಾಸಿಟೀವ್ ಔಷಧಿಯನ್ನು ಕಂಡುಹಿಡಿಯಲಿಕ್ಕಾಗಿಲ್ಲ. ಆದರೂ, ಆದಷ್ಟು ಜಾಗ್ರತೆ ಈ ಕಾಯಿಲೆಗೆ ಔಷಧಿಯನ್ನು ಕಂಡುಹಿಡಿದು, ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ವೈ. ರಾಮಕೃಷ್ಣ.—ಈ ಕಾಯಿಲೆ ಒಂದು ವಿಚಿತ್ರವಾದ ರೋಗ. ಇದನ್ನು ಶಾಶ್ವತವಾಗಿ ಹೋಗಲಾಡಿಸುವುದಕ್ಕೆ ಸರ್ಕಾರದವರು ಏನೇನು ಕಾರ್ಯಕ್ರಮ ಕೈಗೊಂಡಿದ್ದಾರೆ, ಮತ್ತು ಆ ಬಗ್ಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಈ ಕಾಯಿಲೆ ಬರುವುದಕ್ಕೆ ಕಾರಣ ನನಗೆ ಗೊತ್ತಿಲ್ಲ. ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಈ ಕಾಯಿಲೆಗೆ ನಿರ್ದಿಷ್ಟವಾದ ಔಷಧಿ ಇಲ್ಲ ಎಂದು ಹೇಳಿದ್ದಾರೆ. ಆದರೆ, ಆದೇ ಹೇಳಿಕೆಯಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಔಷಧಿ ಕೊಳ್ಳಲು ಮಂಜೂರು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಕರ್ನಾಟಕ ದೇಶದಲ್ಲಿ ತಜ್ಞ ವೈದ್ಯರಿಲ್ಲದೇ ಇರಬಹುದು, ನಮ್ಮ ದೇಶದ ಇತರ ಭಾಗಗಳ ಅಥವಾ ಅಂತರರಾಷ್ಟ್ರೀಯ ಮಟ್ಟದ ವೈದ್ಯ ತಜ್ಞರ ಒಂದು ಸಮಿತಿಯನ್ನು ಮಾಡಿ, ಈ ಕಾಯಿಲೆಗೆ ಒಂದು ಶಾಶ್ವತ ಪರಿಣಾಮವನ್ನು ಕಂಡುಹಿಡಿಯುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೆ ?

SRI M. MALLAPPA.—It is a suggestion for action.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗೆಡೆ.—ಶರಾವತಿ ಮುಳುಗಡೆ ಜಮೀನಿನ ಕಡೆ ಎರಡು ಹೋಬಳಿಗಳಲ್ಲಿ ಈ ಅರಣ್ಯ ಕಾಯಿಲೆ ಬಹಳ ತೀವ್ರವಾಗಿದೆ. ಶರಾವತಿ ನೀರು ಸುತ್ತಲೂ ಆವೃತವಾಗಿರುವುದರಿಂದ ಕರೂರು ಮತ್ತು ಬಾರಂಗಿ ಹೋಬಳಿಗಳು ದ್ವೀಪಗಳಂತೆ ಕಾಣುತ್ತವೆ. ಅಲ್ಲಿಂದ ಸಾಗರಕ್ಕೆ ಆಸ್ಪತ್ರೆಗೆ ರೋಗಿಗಳನ್ನು ಕರೆತರಬೇಕಾದರೆ ೫೦–೬೦ ಮೈಲಿಗಳಾಗುತ್ತವೆ, ಅಲ್ಲಿಂದಲೂ ರೋಗಿಗಳನ್ನು ಕಂಬಳಿ ಹೊದ್ದಿಸಿ ಕೊಂಡು ತರುವ ಪರಿಸ್ಥಿತಿ ಇದೆ. ಈಗಾಗಲೇ ಅಲ್ಲಿ ಐದಾರು ಜನರು ಈ ರೋಗದಿಂದ ಸತ್ತಿದ್ದು, ಅದು ನೂರಾರು ಜನರಿಗೆ ವ್ಯಾಪಿಸಿದೆ ಎಂದು ತಿಳಿದು ಬಂದಿದೆ. ಕರೂರು ಮತ್ತು ಬಾರಂಗಿ ಹೋಬಳಿಗಳು ದ್ವೀಪಗಳಾದ್ದರಿಂದ ಅಲ್ಲಿಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಹೋಗುತ್ತಿಲ್ಲವೆನ್ನುವುದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ವಿಶೇಷ ಗಮನ ಕೊಡಬೇಕು. ಅಲ್ಲದೆ, ಅಲ್ಲಿರುವ ಆರೋಗ್ಯ ಕೇಂದ್ರಕ್ಕೆ ಎರಡು ವರ್ಷಗಳಿಂದ ವೈದ್ಯರೇ ಇಲ್ಲದ ಪರಿಸ್ಥಿತಿ ಇದೆ. ಇದರ ಬಗ್ಗೆಯೂ ಮಾನ್ಯ ಸಚಿವರು ವಿಶೇಷ ಗಮನ ಕೊಟ್ಟು, ಅಲ್ಲಿಗೆ ವೈದ್ಯರ ವ್ಯವಸ್ಥೆಯನ್ನು ಮಾಡುವರೆ?

ಶ್ರೀ ಎಂ. ಮಲ್ಲಪ್ಪ.— ನೀರಿನಿಂದ ಆವೃತವಾಗಿರುವ ಗ್ರಾಮಗಳಿಗೆ ವೈದ್ಯರು ಹೋಗುತ್ತಿಲ್ಲ, ತತ್ಕ್ಷಣವಾಗಿ ಜನರಿಗೆ ಚಿಕಿತ್ಸೆ ದೊರೆಯುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ನಾನು ಕೂಡಲೆ ಕ್ರಮ ತೆಗೆದುಕೊಂಡು, ಅಲ್ಲಿಗೆ ವೈದ್ಯರನ್ನು ಕಳುಹಿಸಿ, ಅಲ್ಲಿನ ಜನರಿಗೆ ಏನು ಅನುಕೂಲವಾಗಬೇಕೋ ಆ ಅನುಕೂಲ ಮಾಡಿಕೊಡುತ್ತೇನೆ.